**<u>ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.</u>**

**<u>ಸಿ ಸಿ ನಂ.6/2019</u>**

| | | |
|---|---|---|
| ಸಾಕ್ಷಿದಾರರ ಹೆಸರುಃ | ನಂಜಯ್ಯ | ಸಿ ಡಬ್ಲ್ಯೂಃ 3 |
| ತಂದೆಯ ಹೆಸರುಃ | ಲೇಟ್ ಮಾದೇಗೌಡ | ಪಿ ಡಬ್ಲ್ಯೂಃ 2 |
| ವಯಸ್ಸುಃ | 55 ವರ್ಷ | |
| ಉದ್ಯೋಗಃ | ವ್ಯವಸಾಯ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ತುರಗನೂರು ಗ್ರಾಮ | **12.12.2023** |

<u>**ಮುಖ್ಯ ವಿಚಾರಣೆಃ** ಮಾನ್ಯ **ಎಪಿಪಿ** ರವರಿಂದಃ</u>

ಈ ಪ್ರಕರಣದ ಆರೋಪಿತರು ನನಗೆ ಗೊತ್ತು. 1 ಮತ್ತು 2 ನೇ ಆರೋಪಿತರು ತೀರಿಕೊಂಡಿರುತ್ತಾರೆ. ಚಾಸಾ-1 ನನಗೆ ಅಣ್ಣ ಆಗಬೇಕು.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಹಾಗೂ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

<u>(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಸಾಕ್ಷಿಯು ಪ್ರತಿಕೂಲವಾಗಿ ನುಡಿದಿದ್ದು, ಅನುಮತಿ ನೀಡಿದೆ.)</u>

<u>**ಪಾಟೀ ಸವಾಲುಃ** ಮಾನ್ಯ **ಎಪಿಪಿ** ರವರಿಂದಃ</u>

ದಿನಾಂಕ 06.04.2018 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ತುರಗನೂರು ಗ್ರಾಮದಲ್ಲಿ ಚಾಸಾ-1 ರವರ ಮನೆಯ ಮುಂದೆ ಇರುವ ಖಾಲಿ ಜಾಗದಲ್ಲಿ 1 ಮತ್ತು 2 ನೇ ಆರೋಪಿತರು 3 ರಿಂದ 5 ನೇ ಆರೋಪಿತರು ನೀಡಿರುವ ಕುಮ್ಮಕ್ಕಿನ ಮೇರೆಗೆ ಚಾಸಾ-1 ರವರ ಖಾಲಿ ಜಾಗದಲ್ಲಿ ಅಕ್ರಮ ಪ್ರವೇಶ ಮಾಡಿ ಸರ್ವೇ ಸೌದೆಯನ್ನು ಹಾಕಿ ಬಣವೆ ಮಾಡಿ, ಮರದ ತುಂಡುಗಳನ್ನು ನೆಟ್ಟು ಮೇಕೆಗಳನ್ನು ಕಟ್ಟಿ ಹಾಕಿರುತ್ತಾರೆ ಎಂದರೆ

ಸರಿಯಲ್ಲ. ಇದನ್ನು ಕೇಳಲು ಬಂದ ಚಾಸಾ-1 ರವರನ್ನು ಉದ್ದೇಶಿಸಿ ಆರೋಪಿತರು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ.

ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ, ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ಅಭಿಯೋಜಕರ ಪರವಾಗಿ ನಿಪಿ-**3** ಎಂದು ಗುರುತಿಸಲಾಯಿತು. ನಾನು ನಿಪಿ-3 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**